## ದಿನಾಂಕ : 21-05-2022 ರಂದು ಬೆಳ್ಳಗ್ಗೆ 03:30 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ:-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 21-05-2022 ರಂದು ಬೆಳ್ಳಗ್ಗೆ 03:30 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಎಂ.ಲೋಕೇಶ್ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

### ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಶಂಕರಪ್ಪ – ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀಮತಿ.ಚಿತ್ರ – ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-80
4. ಶ್ರೀ.ಹೊನ್ನೇಶ್ ಕುಮಾರ್.ಡಿ – ಪಿ.ಎಸ್.ಐ, ಇಂದಿರಾನಗರ ಪೊಲೀಸ್ ಠಾಣೆ,
5. ಶ್ರೀ.ಆನಂದ ಕುಮಾರ್.ಜಿ – ಎ.ಎಸ್.ಐ, ಜೀವನ್‌ಭೀಮಾನಗರ ಸಂಚಾರ ಪೊಲೀಸ್ ಠಾಣೆ,
6. ಶ್ರೀ.ವಿಕ್ರಾಂತ್.ಕೆ – ಸಹಾಯಕ ಅಭಿಯಂತರರು, ಬೃ.ನೀ.ಗಾ(ಪೂರ್ವ)
7. ಶ್ರೀ.ಕುಲಕರ್ಣಿ – ಸದಸ್ಯರು,
8. ಶ್ರೀ.ಸತೀಶ್ ರಾವ್ – ಸದಸ್ಯರು,
9. ಶ್ರೀ.ಮಾಲಾ ಸುಗಂತ – ಸದಸ್ಯರು,
10. ಶ್ರೀ.ನರೇಶ್.ಡಿ.ಮೆಲ್ಲೊ – ಸದಸ್ಯರು,
11. ಶ್ರೀ.ಶ್ರೇಯಸ್ ತೊತ್ವೆ – ಸದಸ್ಯರು,
12. ಶ್ರೀ.ರಾಮ್ ಮೆನನ್– ಸ್ಥಳೀಯ ನಿವಾಸಿಗಳು,
13. ಶ್ರೀ.ರಾಮನ್.ಎನ್.ಆರ್ – ಸ್ಥಳೀಯ ನಿವಾಸಿಗಳು,
14. ಶ್ರೀಮತಿ.ಎಲಿಜಬತ್ – ಸ್ಥಳೀಯ ನಿವಾಸಿಗಳು,
15. ಶ್ರೀ.ಎಸ್.ಪದ್ಮನಾಭನ್ – ಸ್ಥಳೀಯ ನಿವಾಸಿಗಳು,
16. ಶ್ರೀ.ವಿ.ಸಿ.ಅಶೋಕ್ ಕುಮಾರ್ – ಸ್ಥಳೀಯ ನಿವಾಸಿಗಳು,
17. ಶ್ರೀ.ದಿವಾಕರ್.ಟಿ.ಎಸ್ – ಸ್ಥಳೀಯ ನಿವಾಸಿಗಳು,
18. ಶ್ರೀ.ಎ.ಸಾವತ್ – ಸ್ಥಳೀಯ ನಿವಾಸಿಗಳು,

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಶಂಕರಪ್ಪ, ಸಹಾಯಕ ಅಭಿಯಂತರರು ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂದಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

- ಮೊದಲನೇದಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಪರಿಹಾರಿಸಿರುವ ವಿವರಗಳನ್ನು ಸಹಾಯಕ ಅಭಿಯಂತರರು ವಿವರಿಸಿದರು..

➤ 6ನೇ ಎ ಮತ್ತು ಬಿ ಮುಖ್ಯರಸ್ತೆ ಇಂದಿರಾನಗರ 2ನೇ ಹಂತ, ಇಲ್ಲಿ ಚರಂಡಿಯಲ್ಲಿನ ಹೂಳು ತೆಗೆಯುವುದನ್ನು ಪ್ರಾರಂಭಿಸಲಾಗಿದ್ದು, ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಹಾಗೂ ಸದರಿ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಈಗಾಗಲೇ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಅನುಮೋದನೆ ಹಂತದಲ್ಲಿರುತ್ತದೆ, ಟೆಂಡರ್ ಪ್ರಕ್ರಿಯೆನಂತರ ಕಾಮಗಾರಿಯನ್ನು ಕೈಗೊಳ್ಳಾಗುವುದು.

AE. W-80
21-5-2022



Scanned with CamScanner

- 4ನೇ ಮತ್ತು 5ನೇ ಮುಖ್ಯರಸ್ತೆ ಡಿಫೆನ್ಸ್ ಕಾಲೋನಿಯಲ್ಲಿ ಲಿಂಕ್ ರಸ್ತೆಯಲ್ಲ ಜಲಾವೃತವಾಗುತ್ತಿರುವುದನ್ನು ತಡೆಗಟ್ಟಡಲು ರಸ್ತೆಬದಿಯ ಹೂಳನ್ನು ತೆಗೆದು ಬೃಹತ್ ನೀರುಗಾಲುವೆಗೆ ವೆಂಟನ್ನು ತೆರವುಗೊಳಿಸಿ ನೀರನ್ನು ಸರಾಗವಾಗಿ ಹರಿಯುವಂತೆ ಮಾಡಲಾಗಿರುತ್ತದೆ.

- ಡಿಫೆನ್ಸ್ ಕಾಲೋನಿಯ ಆಟದ ಮೈದಾನದಲ್ಲಿ ಹಾಲಿ ಇರುವ ಕೂಲಿ ಕಾರ್ಮಿಕರ ಶೆಡ್ಡುಗಳನ್ನು ಮತ್ತು ಡೆಬ್ರೀಸನ್ನು ತೆರವುಗೊಳಿಸಲು ಕೂಡಲೇ ಕ್ರಮ ವಹಿಸಲಾಗುವುದು ಎಂದು ತಿಳಿಸಲಾಯಿತು.

- 9ನೇ ಮತ್ತು 10ನೇ ಮುಖ್ಯರಸ್ತೆ, ಜೈನ್ ಕಾಲೇಜ್ ಸುತ್ತಮುತ್ತಲಿನ ಪ್ರದೇಶದ 13ನೇ, 14ನೇ, 15ನೇ, 16ನೇ ಮತ್ತು 17ನೇ ಅಡ್ಡರಸ್ತೆಗಳಿಗೆ ಡಾಂಬರೀಕರಣ ಮಾಡಲು ವೆಟ್‌ಮಿಕ್ಸ್ ಹಾಕಿ ರೋಲ್ ಮಾಡಲಾಗುತ್ತಿದ್ದು, ಮಳೆಯ ಸಂಪೂರ್ಣ ನಿಲುಗಡೆಯ ನಂತರ ಡಾಂಬರೀಕರಣ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸಲಾಯಿತು.

- ಜಿಯೋ ಮತ್ತು ಏರ್‌ಟೆಲ್ ಜಕ್ಷನ್ ಬಾಕ್ಸ್‌ಗಳನ್ನು ರಸ್ತೆಯ ಮೇಲ್ಮಟ್ಟಕ್ಕೆ ಪುನರ್‌ನಿರ್ಮಾಣ ಮಾಡಲಾಗಿರುವುದೆಂದು ತಿಳಿಸಿದರು.

- ರಸ್ತೆ ಬದಿಯಲ್ಲಿ ಹಳೆಯ ಕೆಟ್ಟುನಿಂತಿರುವ ವಾಹನಗಳನ್ನು ತೆರವುಗೊಳಿಸಲು ಪೋಲೀಸ್ ಸಿಬ್ಬಂದಿಯೊಂದಿಗೆ ಜಂಟಿಯಾಗಿ ತೆರವು ಕಾರ್ಯಚರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಲಾಯಿತು.

(ಕ್ರಮ:- ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ವಾರ್ಡ್-80)

- 7ನೇ ಮುಖ್ಯರಸ್ತೆ, 80 ಅಡಿರಸ್ತೆಯಲ್ಲಿ ಒಳಚರಂಡಿ ಮತ್ತು ನೀರಿನ ಪೈಪ್‌ಗಳು ಒಡೆದುಹೋಗಿದ್ದು, ಸೋರುವಿಕೆಯನ್ನು ತಡೆಗಟ್ಟಲು ಹಾಗೂ 13ನೇ ಅಡ್ಡರಸ್ತೆ, ಇಂದಿರಾನಗರ 2ನೇ ಹಂತ ಇಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಗೆದಿರುವ ಭಾಗಕ್ಕೆ ಡಾಂಬರೀಕರಣ ಮಾಡಲು ತಿಳಿಸಿದರು
(ಕ್ರಮ:- ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ (ಯು.ಎಫ್.ಡಬ್ಲ್ಯೂ))

- 6ನೇ ಮುಖ್ಯರಸ್ತೆ ಬೀದಿ ಬದಿ ವ್ಯಾಪಾರಿಗಳಿಂದ ಪಾದಚಾರಿ ಮಾರ್ಗಕ್ಕೆ ಅನಾನುಕೂಲ ಉಂಟಾಗಿದ್ದು ಕೂಡಲೇ ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಸ್ಥಳೀಯ ನಿವಾಸಿಗಳು ಪ್ರಸ್ತಾಪಿಸಿದರು,
(ಕ್ರಮ: ಬಿಬಿಎಂಪಿ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್-80)

- 100 ಅಡಿ ರಸ್ತೆ ಉಡುಪಿ ಪಾರ್ಕ್ ಹೋಟೆಲ್ ಮುಂಭಾಗದಿಂದ 6ನೇ ಮುಖ್ಯರಸ್ತೆಯ ಜಂಕ್ಷನ್‌ನಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದ್ದು, ಕೂಡಲೇ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಂಚಾರ ಪೋಲೀಸ್ ರವರಿಗೆ ಕೋರಿದರು.
(ಕ್ರಮ:- ಸಂಚಾರ ಪೋಲೀಸ್ ಠಾಣೆ, ಜೀವನ್‌ಭೀಮಾನಗರ)

- 80 ಅಡಿ ರಸ್ತೆ (ವೈಟ್‌ಟಾಪಿಂಗ್) 6ನೇ ಮುಖ್ಯರಸ್ತೆಯಿಂದ ಬಿ.ಎಸ್.ಎನ್.ಎಲ್ ಜಂಕ್ಷನ್‌ವರೆಗೆ ಪಾದಚಾರಿ ಮಾರ್ಗದಲ್ಲಿ ಪ್ರೀಕ್ಯಾಸ್ಟ್ ಸ್ಲ್ಯಬ್‌ಗಳನ್ನು ಅಳವಡಿಸುವುದು, 80 ಅಡಿಯ ಮತ್ತು ಸಿ.ಎಂ.ಹೆಚ್ ರಸ್ತೆಗಳಲ್ಲಿ ಬಸ್ ನಿಲ್ದಾಣದ ಮಾರ್ಕಿಂಗ್, ಪಾರ್ಕಿಂಗ್ ಲೈನ್, ಇಂಡಿಕೆಟರ್ಸ್, ಲೇನ್ ಮಾರ್ಕಿಂಗ್, ರೋಡ್ ಸೈನೇಜ್‌ಗಳನ್ನು, ಬಲಾಡ್ಸ್‌ಗಳನ್ನು ಅಳವಡಿಸಲು ಕೋರಿದರು.
(ಕ್ರಮ:- ಬಿ.ಬಿ.ಎಂ.ಪಿ ಯೋಜನೆ ವಿಭಾಗ ಕೇಂದ್ರ)

Shankar AE. W-80 21.5.2022



Scanned with CamScanner

* 6ನೇ ಮುಖ್ಯರಸ್ತೆಯ ಚರ್ಚ್ ಮುಂಭಾಗದಿಂದ 80 ಅಡಿ ರಸ್ತೆಯವರೆಗೆ ಬೃಹತ್ ನೀರುಗಾಲುವಯಲ್ಲಿನ ಹೂಳನ್ನು ತೆರವುಗೊಳಿಸಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಹಾಲಿ ಇರುವ ಬೃಹತ್ ನೀರುಗಾಲುವೆಗಳನ್ನು ಸ್ವಚ್ಛಗೊಳಿಸಲು ಕ್ರಮ ವಹಿಸುವಂತೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳಲು ಸಭೆಯಲ್ಲಿ ಕೋರಿದರು.
  (ಕ್ರಮ:- ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ, ಬಿ.ಬಿ.ಎಂ.ಪಿ)

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ಮುಂದಿನ ಸಭೆಗೆ ಗೈರು ಹಾಜರಾದ ಇತರೆ ಇಲಾಖೆಯವರನ್ನು ಹಾಜರಾಗುವಂತೆ ಕ್ರಮವಹಿಸಲು ತಿಳಿಸಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21.5.2022

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-80

21/5/2022

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 80
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 80



Scanned with CamScanner